ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ

ರಾಣೇಬೆನ್ನೂರು.

ಸಿ.ಸಿ.ಸಂಖ್ಯೆ: 710/2024

ಪಿ ಡಬ್ಲ್ಯೂ: 5

ಸಿ ಡಬ್ಲ್ಯೂ: 6

| | | |
|---|---|---|
| ಸಾಕ್ಷಿಯ ಹೆಸರು | : | ಮಂಜಪ್ಪ ಎಂ. |
| ತಂದೆಯ ಹೆಸರು | : | ಮೂಗಪ್ಪ ಎ. |
| ವಯಸ್ಸು | : | 61 |
| ಉದ್ಯೋಗ | : | ನಿವೃತ್ತ ಉಪ ಅಧೀಕ್ಷಕರು |
| ವಾಸಸ್ಥಳ | : | ದಾವಣಗೆರೆ |

ದಿನಾಂಕ: 04-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು ದಿನಾಂಕ 05-02-2024 ರಿಂದ 07-06-2024 ರವರೆಗೆ ರಾಣೇಬೆನ್ನೂರು ಅಬಕಾರಿ ವಲಯದ ಅಬಕಾರಿ ಉಪ ಅಧೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 20-05-2024 ರಂದು ಮುಂದುವರೆದ ತನಿಖೆಗಾಗಿ ಚಾ ಸಾ 1 ರವರಿಂದ ಕಡತವನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 22-05-2024 ರಂದು ಚಾ ಸಾ 4 ರವರ ಮೂಲಕ ರಾಸಾಯನಿಕ ಪರೀಕ್ಷೆಗಾಗಿ ಮುದ್ದೆ ಮಾಲುಗಳನ್ನು ಎಫ್.ಎಸ್.ಎಲ್. ಹುಬ್ಬಳ್ಳಿಗೆ ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕ 07-06-2024 ರಂದು ಚಾ ಸಾ 4 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿನಾಂಕ 24-05-2024 ರಂದು ವಾಹನದ ಮಾಲೀಕತ್ವದ ಕುರಿತು ಆರ್ ಟಿ ಓ ಹೊಸಪೇಟೆಗೆ ಪತ್ರ ಬರೆದಿರುತ್ತೇನೆ. ನಂತರ ಮುಂದುವರೆದ ತನಿಖೆಗಾಗಿ ಕಡತವನ್ನು ಚಾ ಸಾ 7 ರವರಿಗೆ ನೀಡಿರುತ್ತೇನೆ.

3. ಸಾಕ್ಷಿಯು ದಿನಾಂಕ 24-05-2024 ರ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8 ಎ ಎಂದು ಗುರುತಿಸಲಾಯಿತು. ದಿನಾಂಕ 22-05-2024 ರ ಪತ್ರವನ್ನು ನಿಪಿ 9 ಎಂದು, ಸಾಕ್ಷಿಯ ಸಹಿಯನ್ನು ನಿಪಿ 9 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲು ಮತ್ತು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ನಾನು ಚಾ ಸಾ 1 ರವರಿಂದ ಕಡತ ಪಡೆದಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಿಪಿ 9 ರಂತೆ ಎಫ್ ಎಸ್. ಎಲ್ ವರದಿಗೆ ಕಳುಹಿಸಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಚಾ ಸಾ 4 ರವರ ಹೇಳಿಕೆ ಪಡೆದಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ನಿಪಿ 8 ರಂತೆ ದಾಖಲೆ ಕೇಳಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು 1 ನೇ ಅಧಿಕ ಜೆಎಂಎಫ್‌ಸಿ ನ್ಯಾಯಾಲಯ
ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 710/2024

ಪಿ ಡಬ್ಲ್ಯೂಃ 6
ಸಿ ಡಬ್ಲ್ಯೂಃ 5

| | | |
|---|---|---|
| ಸಾಕ್ಷಿಯ ಹೆಸರು | : | ಕೃಷ್ಣಪ್ಪ |
| ತಂದೆಯ ಹೆಸರು | : | ರಾಮಪ್ಪ |
| ವಯಸ್ಸು | : | 65 |
| ಉದ್ಯೋಗ | : | ವ್ಯವಸಾಯ ಮತ್ತು ವ್ಯಾಪಾರ |
| ವಾಸಸ್ಥಳ | : | ರಾಣೇಬೆನ್ನೂರು |

ದಿನಾಂಕಃ 04-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ರಾಣೇಬೆನ್ನೂರಿನ ದೌಲತ್ ಬಜಾರ್ ನಲ್ಲಿ ಶಕ್ತಿ ವೈನ್ಸ್ ಹೆಸರಿನಲ್ಲಿ ಸಿ.ಎಲ್.2 ಮದ್ಯದ ಅಂಗಡಿ ನನ್ನ ಹೆಸರಿನಲ್ಲಿ ಇರುತ್ತದೆ. ಈ ಪ್ರಕರಣಕ್ಕೆ ಕುರಿತಂತೆ ಪೊಲೀಸರು ನೋಟೀಸನ್ನು ನೀಡಿದ್ದು ಸದರಿ ನೋಟೀಸ್ ನಲ್ಲಿ ಕೇಳಿದಂತೆ ಈ ಪ್ರಕರಣದ ಮು.ಮಾ.1 ರಿಂದ 48 ರ ಟೆಟ್ರಾ ಪ್ಯಾಕೆಟ್ ಗಳನ್ನು ನಮ್ಮ ಮದ್ಯದ ಅಂಗಡಿಯಿಂದ ಮಾರಾಟ ಮಾಡಲಾಗಿರುತ್ತದೆ. ಸದರಿ ಮಾರಾಟಕ್ಕೆ ಕುರಿತು ಬಿಲ್ಲುಗಳನ್ನು ನೀಡಿರುತ್ತೇನೆ. ಸದರಿ ಟೆಟ್ರಾ ಪ್ಯಾಕೆಟ್ ಗಳನ್ನು ಯಾರಿಗೆ ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ, ಆದರೆ ನಮ್ಮ ಅಂಗಡಿ ಮ್ಯಾನೇಜರ್ ಗೆ ಗೊತ್ತಿರುತ್ತದೆ. ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ 90 ಮಿಲಿಯ 24 ಟೆಟ್ರಾ ಪ್ಯಾಕೆಟ್ ಗಳನ್ನು ಮಾರಾಟ ಮಾಡಲು ಅಧಿಕಾರ ಇರುತ್ತದೆ.

2. ಈ ಪ್ರಕರಣದ ಟೆಟ್ರಾ ಪ್ಯಾಕೆಟ್ ಗಳನ್ನು ಹಲವು ಜನರು ಬಂದು ಖರೀದಿ ಮಾಡಿರುತ್ತಾರೆ. ದಿನಾಂಕ 18-09-2024 ರಂದು ಈ ವಿಷಯದ ಕುರಿತು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಸದರಿ ಮಾರಾಟದ ಕುರಿತು ಎರಡು ಬಿಲ್ಲುಗಳನ್ನು ಹಾಜರುಪಡಿಸಿದ್ದು ಸದರಿ ಬಿಲ್ಲುಗಳನ್ನು ನಿಪಿ 10 ಮತ್ತು ನಿಪಿ 11 ಎಂದು ಗುರುತಿಸಲಾಯಿತು. ದಿನಾಂಕ 13-09-2024 ರ ವಿಚಾರಣಾ ನೋಟೀಸನ್ನು ಸಾಕ್ಷಿಯು ಗುರುತಿಸಿದ್ದು ಅದನ್ನು ನಿಪಿ 12 ಎಂದು ಗುರುತಿಸಲಾಯಿತು.

**ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ಮು.ಮಾ.1 ರಿಂದ 48 ನ್ನು ಆರೋಪಿ ಒಬ್ಬನೇ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆರೋಪಿಗೆ ನಾನು ಒಟ್ಟು 24 ಟೆಟ್ರಾ ಪ್ಯಾಕೆಟ್ ಗಳನ್ನು ನೀಡಿರುತ್ತೇನೆ ಎಂದರೆ ಸರಿ. ಅದನ್ನು ಹೊರತುಪಡಿಸಿ ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.